


International Journal of Kannada Research
www.kannadajournal.com

ISSN: 2454–5813
IJKR 2022; 8(4): 36-38
© 2022 IJKR
www.kannadajournal.com
Received: 24-08-2022
Accepted: 27-09-2022

**ಪ್ರಭಾವತಿ. ಜೆ**
ಸಹಾಯಕ ಪ್ರಾಧ್ಯಾಪಕರು, ಎಂ. ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಕರ್ನಾಟಕ, ಭಾರತ

**Corresponding Author:**
**ಪ್ರಭಾವತಿ. ಜೆ**
ಸಹಾಯಕ ಪ್ರಾಧ್ಯಾಪಕರು, ಎಂ. ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಕರ್ನಾಟಕ, ಭಾರತ

# ಡಾ. ಶಿವರಾಮ ಕಾರಂತರ 'ಚೋಮನ ದುಡಿ'ಯಲ್ಲಿನ ಸ್ತ್ರೀ ಸಂವೇದನೆಯ ಅಂಶಗಳು

**ಪ್ರಭಾವತಿ. ಜೆ**

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ ಸಂವೇದನೆಯ ಅಂಶಗಳನ್ನು ಮತ್ತು ಆ ಹಿನ್ನೆಲೆಯ ಪೂರಕ ಪಾತ್ರಗಳ ಚಿತ್ರಣವನ್ನು ಕಾಣಬಹುದಾಗಿದೆ. ಸ್ವಾತಂತ್ರ ನಂತರದ ಪರಿಸ್ಥಿತಿಯಲ್ಲಿ ಬದಲಾಗದ ಸ್ತ್ರೀ ಸ್ಥಾನ–ಮಾನಗಳು ಮತ್ತು ಸ್ತ್ರೀ ಅಸಮಾನತೆಯ ಸಂದರ್ಭಗಳನ್ನು ಕಾರಂತರ ಕಾದಂಬರಿಗಳಲ್ಲಿ ಪ್ರಸ್ತಾಪಿಸಿರುವುದು ಕಾರಂತ 'ಸಮಾನತೆ'ಯ ಪರಿಕಲ್ಪನೆಗೆ ಮತ್ತು ಸಾಮಾಜಿಕ ಕಳಕಳಿಗೆ ಹಿಡಿದ ಕೈಗನ್ನಡಿ ಎನ್ನಬಹುದು. ಕಾರಂತರು ಬರೆದಿರುವ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಸ್ತ್ರೀ ಸಂವೇದನೆಯ ಸೂಕ್ಷ್ಮ ಮತ್ತು ವಿಸ್ತಾರ ಅಂಶಗಳನ್ನು ಓದುಗರು ಗ್ರಹಿಸಬಹುದು. ಕಾರಂತರ ಸಾಮಾಜಿಕ ಕಳಕಳಿ, ಸ್ತ್ರೀ ಸಮಾನತೆಯ ಅಂಗೀಕಾರಕ್ಕೆ ಪೂರಕವಾದ ಅಂಶಗಳು ಅವರ ಕಾದಂಬರಿಗಳಲ್ಲೂ ಕಾಣಸಿಗುತ್ತದೆ. ಅಂತೆಯೇ ಅದರ ಒಂದು ನಿದರ್ಶನವಾಗಿ 'ಚೋಮನ ದುಡಿ' ಕಾದಂಬರಿಯನ್ನು ಅವಲೋಕಿಸಬಹುದು. ಇಲ್ಲಿ ಸ್ತ್ರೀ ಸಂವೇದನೆಯ ಅದಮ್ಯ ಮತ್ತು ಪ್ರಭಾವಿಯುತ ಭಾವನೆಗಳನ್ನು ಗ್ರಹಿಸಿಬಹುದು.

ಚೋಮನ ದುಡಿಯ ಒಂದೇ ಒಂದು ಹೆಣ್ಣು ಕುಡಿ 'ಬೆಳ್ಳಿ' ಆಕೆ ಚೋಮನ ಜೀವ ಚೋಮನ ಜಡ ಶರಿರದ ಚೇತನ ಶಕ್ತಿಯ ಪ್ರತೀಕ. ಚೋಮನ ದುಡಿಯ ಬಡಿತದೊಂದಿಗೆ ಅವಳ ಹೃದಯದ ಮಿಡಿದ ಲೇ ಲೇ ... ಎಂದು ಹಾಡಿದಾಗಲೇ ಅವನ ಬದುಕಿನ ನಿನಾದ ಹೊರ ಹೊಮ್ಮುವುದು. ಚೋಮನ ಹೆಂಡತಿ ರಕ್ತ ಕಾರಿ ಸತ್ತ ಮೇಲೆ, ಇಡೀ ಸಂಸಾರದ ಕಣ್ಣಾಗಿ, ತಾಯಿಯಾಗಿ ಬೆಳ್ಳಿ ನಿಲ್ಲುತ್ತಾಳೆ. ಲವಲವಿಕೆಯ ಜೀವಂತಿಕೆಯ ಸೆಲೆಯಾದ ಆಕರ್ಷಕ ವ್ಯಕ್ತಿತ್ವ ಒಳಗೊಂಡಿರುವ ಬೆಳ್ಳಿ, ಇಡೀ ಕಾದಂಬರಿಯ ಬೆಳ್ಳಿ ಚುಕ್ಕಿ. ಅವಳ ಬದುಕು ನಿರಂತರ ಚಲನಶೀಲವಾದುದು, ಅವಳಿಗೆ ಅನುದಿನವೂ ಶ್ರಮಿಕ ಬದುಕಿನ ಸಾತತ್ಯ. ಮೇಲ್ನೋಟಕ್ಕೆ ಬೆಳ್ಳಿ ಮನೆ ಮಗಳಾಗಿ ಕಂಡರೂ "ನಿತ್ಯವೂ ಹೊರಗಿನ ಕೆಲಸಕ್ಕೆ ಹೋಗುತ್ತಾಳೆ. ಆದರೆ ಸಂಜೆಯ ತನಕ ಮನೆಯನ್ನು ಬಿಟ್ಟಿರಲು ಸಾಧ್ಯವಿಲ್ಲ. ಅಡುಗೆಯ ಕೆಲಸ ಮಕ್ಕಳ ಆರೈಕೆ, ಎಲ್ಲವೂ ಅವಳಿಂದಲೇ ಸಾಗಬೇಕು. ಆದುದರಿಂದ ಅವಳು ಬೇಗ ಎದ್ದು ಕಾಡಿಗೆ ಹೋಗಿ ಒಂದು ಹೊರೆ ಸೊಪ್ಪನ್ನು ತಂದು, ತನ್ನ ಧಣಿಗಳ ಮನೆಯ ಅಂಗಳದಲ್ಲಿ ಹಾಕಿದರೆ ಮುಖ್ಯ ಕೆಲಸ ಮುಗಿಯಿತೆಂದು ತಿಳಿಯುತ್ತಾಳೆ. ಸಂಸಾರದಲ್ಲಿ ಬೆಳ್ಳಿಯ ದುಡಿಮೆಯೇ ಹೆಚ್ಚು. ಜವಾಬ್ದಾರಿಯೂ ಹೆಚ್ಚು. ಕುಟುಂಬ ನಿರ್ವಹಣೆಯ ಕೌಶಲ್ಯ ಅತಿ ಚಿಕ್ಕ ವಯಸ್ಸಿನಲ್ಲಿಯೇ ಉದ್ದ ಲೋಟದ ಗಂಜಿಯನ್ನು ಮಾಡಿ ಆರು ಜನರ ಸಂಸಾರ ಪೋಷಣೆ ಮಾಡುವ ಅವಳು ಅನುಕೂಲ ದೊರೆತಾಗೆಲ್ಲಾ ಒಂದೆರಡು ಬುಟ್ಟಿಗಳನ್ನು ಹೆಣೆಯುತ್ತಾಳೆ. ಜೊತೆಗೆ ಅದನ್ನು ಮಾರಿ ತಂದೆಯ ಹೆಂಡದ ದಾಹವನ್ನು ತೀರಿಸುತ್ತಾಳೆ.

ಬದುಕಿನ ನೈಜತೆಯನ್ನು ಇದ್ದಕ್ಕಿದ್ದಂತೆ ಸ್ವೀಕರಿಸುವ ವಾಸ್ತವ ದೃಷ್ಟಿ ಕಾರಂತರ ಮಹಿಳಾ ಪಾತ್ರಗಳಿಗಿವೆ. ಅವರು ಚಿತ್ರಿಸುವ ಸಾಂಪ್ರದಾಯಿಕ ಹೆಂಗಸರ ಜಗತ್ತು ವಿಸ್ತಾರವಾದುದಲ್ಲ. ತಮ್ಮ ಮಿತಿಯಲ್ಲಿ ತಮ್ಮ ಬದುಕನ್ನು ಹರಡಿಕೊಂಡು ಅದರಲ್ಲೇ ಸಾರ್ಥಕ ಬಾಳ್ವೆಯನ್ನು ನಡೆಸಲು ಇಚ್ಚಿಸುವರು. ಕೈಗೂಡದ ಆಸೆಗಳ ಬಗೆಗೆ ಕನಸು ಕಾಣುತ್ತಾ ಕುಳಿತು ಕೊಳ್ಳುವವರೂ ಅವರಲ್ಲ. ನಿಂತ ನೆಲೆಗಟ್ಟಿನ ಮೇಲೆ ಭದ್ರವಾಗಿ ಕಾಲೂರುವವರು. ಕೆಲವು ಹೆಂಗಸರು ಏನೂ ಗೊತ್ತಿಲ್ಲದೆ ಮನೆಯ ಮಾಲೆಯಲ್ಲಿ ತೆಪ್ಪಗೆ ಗೋಣಾಡಿಸುವ ಪ್ರವೃತ್ತಿಯನ್ನು ಹೊಂದಿದರೆ, ಕೆಲವರು ದಿಟ್ಟೆಯರು, ಬದುಕಿನ ಬಗೆಗೆ ದೂರದೃಷ್ಟಿಯುಳ್ಳವರು. ಕತ್ತಲು–ಬೆಳಕು, ಸೋಲು–ಗೆಲುವು ಸರಿ–ತಪ್ಪುಗಳ ವಿಶ್ಲೇಷಣೆ ನಡೆಸುವವರು. ಬೇಕು ಬೇಡಗಳ ಪರ ವಿರೋಧಿ ಚರ್ಚೆಗಳನ್ನು ನಡೆಸಲು ಅವರಿಗೆ

ಮುಕ್ತ ಅವಕಾಶವಿದೆ. ಮಹಿಳೆಯ ವಿಚಾರ ಸ್ವಾತಂತ್ರಕ್ಕೆ ಮನ್ನಣೆಗೆ ನೀಡುವಂತೆ, ಕಾರಂತರು ವಿಚಾರ, ವಿವೇಕದ ನುಡಿಗಳನ್ನು ಅವರ ಬಾಯಿಯಿಂದ ನುಡಿಸುತ್ತಾರೆ. ಬೆಳ್ಳಿ ಇಂತಹ ವಾಸ್ತವ ದೃಷ್ಟಿಯನ್ನು ಹೊಂದಿದ ಪ್ರಬುದ್ಧ ಪಾತ್ರ "ಬೆಳ್ಳಿಯು ಜಾಣೆ" ತಮ್ಮ ನೆಲೆಯನ್ನರಿತವಳು. ಲೋಕವೆನ್ನುವ ಹಾಗೆ ಕರಿನಾಯಿ ಬಿಳಿಯದಾಗಲಾರದೆಂದು ಬಲ್ಲವಳು. ಚೋಮನ ಮಾನಸಿಕ ಜಗತ್ತಿಗೆ ಬೆಳ್ಳಿ ತುಂಬಾ ಹತ್ತಿರ. ಅವನ ನೋವು ನಲಿವುಗಳನ್ನೆಲ್ಲಾ ತುಂಬಾ ಹತ್ತಿರದಿಂದ ಸ್ಪಂದಿಸುವವಳೂ ಅವಳೇ. ಅವಳಿಗೆ ಅರ್ಥವಾಗುತ್ತದೆ. ಬೇಸಾಯಗಾರನಾಗಬೇಕೆಂಬ ಚೋಮನ ಕುತ್ತಿಗೆಯವರೆಗಿನ ಆಸೆಯನ್ನು ಅವನು ಹೇಳಿಕೊಳ್ಳುವುದು ಮೊದಲು ಬೆಳ್ಳಿಯಲ್ಲಿಯೇ, ತಂದೆಯ ಅಭಿಪ್ರಾಯಕ್ಕೆ ಪ್ರತಿಯಾಡುವ ಧೈರ್ಯ ಅವಳಿಗೆ ಮಾತ್ರವಿದೆ.

ಬೆಳ್ಳಿಗೆ ಮೈ ತುಂಬಾ ಹೊದೆಯಲು ಬಟ್ಟೆಯಲ್ಲಿದ ಸ್ಥಿತಿ, ಬೆಳಕು ಕಾಣಬೇಕಾದರೆ ಒಲೆಯ ಮುಂದೆ ಕೂತು ಉಸಿರನ್ನೆಲ್ಲಾ ಬಸಿದು ಊದಿದರೆ ಸಿಗುವುದು ಬರಿಯ ಬೂದಿ ಇದರ ಮಧ್ಯೆ ಮನೆಗೆ ಬರುವ ಅತಿಥಿಗಳಿಗೆ ಧನಿಗಳ ಮನೆಯ ಹೆಂಗಸರಿಂದ ಕಾಡಿ, ಬೇಡಿ ತಂದ ಉಪ್ಪು, ಮೆಣಸು, ಧಾನ್ಯ ಕಾಳುಗಳೊಟ್ಟಿಗೆ, ಮೊಲ ಮತ್ತು ಎಮ್ಮೆಯ ಮಾಂಸದೂಟ ಮಾಡಿ ಬಡಿಸುವ ಅತಿಥಿ ಸತ್ಕಾರ ಔದಾರ್ಯ ಅವಳದ್ದು, ಇಂತಹ ಉದಾರ ಮನಸ್ಥಿತಿಯ ಹೆಣ್ಣು ತನ್ನ ಕುಟುಂಬದ ಸ್ವಾಸ್ಥ್ಯಕ್ಕಾಗಿ ತನ್ನ ತಂದೆಯ ಸಾಲ ತೀರಿಸಲು ಮನ್ವೇಲ ಮತ್ತು ಮಿಂಗೇಲ ದೊರೆಯ ಕಾಮದ ಪಾಶಕ್ಕೆ ಒಳಗಾಗಬೇಕಾಗುತ್ತದೆ. ಆರ್ಥಿಕ ದಾಸ್ಯ, ಅದರಿಂದ ಹುಟ್ಟಿದ ಲೈಂಗಿಕವಾಗಿ ಸುಲಭವಾಗಿ ಸಿಕ್ಕಿ ಬಿಡಬಹುದಾದ ತಳ ಸಮುದಾಯದ ಹೆಣ್ಣು ಸಮಾಜ ವರ್ಗ ತಾರತಮ್ಯಕ್ಕೆ ಹಿಡಿದ ಕೈಗನ್ನಡಿ, ಬೆಳ್ಳಿ ಇಂತಹ 'ಹೆಣ್ಣಿನ ನೆಲೆಗಳ ದುರಂತ ಸ್ಥಿತಿಯನ್ನು ಪ್ರತಿನಿಧಿಸುತ್ತಾಳೆ.

ವರ್ಷಾನುಗಟ್ಟಲೆ ತೀರಿಸಲಾಗದ ತನ್ನ ತಂದೆಯ ಸಾಲವನ್ನು ಬೆಳ್ಳಿಯ ದೈಹಿಕ ಆಕರ್ಷಣೆ ಸುಲಭವಾಗಿ ತೀರಿಸಿ ಬಿಡುತ್ತಿದ್ದಾಗ, ಕಾಮದ ದಾಸ್ಯ ಕ್ಷಣ ಮಾತ್ರದಲ್ಲಿ ತೀರಿಸುತ್ತದೆ ಎನ್ನುವುದನ್ನು ಗಮನಿಸಿದರೆ ಲೈಂಗಿಕ ದಾಸ್ಯಕ್ಕೂ, ಆರ್ಥಿಕ ದಾಸ್ಯಕ್ಕೂ ಇರುವ ನಿಕಟ ಸಂಬಂಧವನ್ನು ಗುರುತಿಸಬಹುದು. ಬೆಳ್ಳಿ ಶೀಲ ಮಾರಿ ಸಾಲ ತೀರಿಸಿದಳು. ಇದು ವ್ಯವಸ್ಥೆಯ ದುರಂತವನ್ನು ಸೂಚಿಸುತ್ತಿರುವುದನ್ನು ಗಮನಿಸಬಹುದು.

ಮನ್ವೇಲನ ಪ್ರಣಯ ಚೇಷ್ಟೆಗಳನ್ನೆಲ್ಲಾ ಅರ್ಥ ಮಾಡಿಕೊಂಡು ಅದಕ್ಕೆ ತಟಸ್ಥವಾಗಿ ನಿಂತು ಪ್ರತಿಕ್ರಯಿಸುವುದು "ನಿನ್ನ ಅಪ್ಪನ ಸಾಲದಲ್ಲಿ ಎಷ್ಟು ತೀರಿತಂತೆ? ನಿನ್ನ ಲೆಕ್ಕವನ್ನು ನೋಡಬೇಕಾಗಿತ್ತು. ಸಂಜೆ ಬಂಗಲೆಗೆ ಬಾ" ಎಂಬ ಮಿಂಗೇಲನ ಮಾತಿಗೆ ಎದುರಾಡದೆ ಲೆಕ್ಕ ನೋಡುವ ನೆಪದಲ್ಲಿ ಅವನ ಕಾಮದ ತೃಷೆಗೆ ಒಳಗಾಗುವುದು ಈ ವ್ಯವಸ್ಥೆಯು ರೂಪಿಸಿದ ಅಸಹಾಯಕತೆಯ ಒಂದು ಭಾಗವೇ ಆಗಿದೆ.

'ಮನ್ವೇಲನ ಕರುಣೆಯಿಂದ ಸಾಲ ತಿರುವುದಾದರೆ ಏನಾದರೇನೆಂಬ ಉದಾಸಿನ'ದಲ್ಲಿ ಬೆಳ್ಳಿ ಅನುಭವಿಸಿದ ಯೌವ್ವನದ ದುಡುಕೂ ಇದೆ.

ಸಂಕಪ್ಪಯ್ಯ ಚೋಮ–ಬೆಳ್ಳಿಯ ಸಂಬಂಧದ ಮಾನವೀಯ ಮುಖವು ಆರ್ಥಿಕ ಶಕ್ತಿಯ ಹರಿಕಾರರಾದ ಮಿಂಗೇಲ ಮತ್ತು ಮನ್ವೇಲರ ಪಾಶವಿ ಮುಖಕ್ಕೆ ಸಮನಾದುದಲ್ಲ. ಕರುಣೆ, ಸಹಾನುಭೂತಿ, ಅಸಹಾಯಕತೆಯ 'ದೇಶಿ'ಯ ಮಾನವಿಯತೆ ಮತ್ತು ಕ್ರೌರ್ಯ, ಕಾಮುಕತೆ, ಪೈಶಾಚಿಕ ಪ್ರವೃತ್ತಿಯ ಪರಕೀಯ' ಅಮಾನವಿಯತೆ ಎರಡೂ ದಲಿತ ಮಹಿಳೆ ಮೇಲೆ ಉಂಟು ಮಾಡಿದ ಪ್ರಭಾವವನ್ನು ಕಾರಂತರು ಆರ್ಥಿಕ ನೆಲೆಯಲ್ಲಿ ಶೋಧಿಸುತ್ತಾರೆ.

ಬೆಳ್ಳಿಯ ಶೀಲಭಂಗ, ಚೋಮನ ನೈತಿಕ ಹೊಣೆಗಾರಿಕೆಯ ಭಂಗವೂ ಹೌದು. ಈ ಹೊಣೆಗಾರಿಕೆಯ ಭಂಗದ ಆಘಾತವೇ ಅವನ ಅವಸಾನಕ್ಕೆ ಕಾರಣ. ಗುಡಿಸಿನೊಳಗೆ ಹೊಕ್ಕು ವಿಚಾರ ಮಗ್ನನಾದ ಚೋಮನಿಗೆ 'ನನ್ನ ಬೆಳ್ಳಿ ನನ್ನನ್ನು ವಂಚಿಸಿ ಬಿಟ್ಟಳೇ? ಎಂಬ ದುಃಖಕ್ಕೆ 'ಅವಳ ತಾರುಣ್ಯ, ತಾನವಳ ಮದುವೆಯನ್ನು ಮುಂದುವರೆಸದೇ ಇರುವ ತಪ್ಪು ಕರುಣೆಯಾಗಿ ಹರಿಯುತ್ತದೆ. "ಪಾಪ, ನಾನು ಅವಳಂತೆ ಹೆಣ್ಣಾಗಿದ್ದರೆ, ನನ್ನ ಪಾಡೇನು"? ಎಂಬ ಸಹಜ ಸಂವೇದನೆಯೂ ಪ್ರಕಟವಾಗುತ್ತದೆ.

ಕುಟುಂಬ ನಿರ್ವಹಣೆಯಲ್ಲಿ ಬೆಳ್ಳಿ ತೋರುವ ನಿಷ್ಠೆ, ಚೋಮನ ಆವೇಶ, ಆಲೋಚನೆ ಹಾರಾಟಗಳೆಲ್ಲಾ ಅವಳು ಹಾಕುವ 'ಬ್ರೇಕು' ತಂದೆಯ ಸಾಲ ತೀರಿಸಲು ಕಾಫಿ ತೋಟಕ್ಕೆ ದುಡಿಯಲು ಹೋಗುವ ಅವಳ ಕರ್ತವ್ಯ ಪ್ರಜ್ಞೆ ಇವೆಲ್ಲವೂ ಕಾದಂಬರಿಯಲ್ಲಿ ಬೆಳ್ಳಿಯ ಇತ್ಯಾತ್ಮಕ ಅಥವಾ ಗುಣಾತ್ಮಕ ಅಂಶಗಳಾಗಿ ಮೂಡಿ ಬಂದಿದೆ. ಅವಳ ಶೀಲಭಂಗವೊಂದೇ ಇಲ್ಲಿ ನೇತ್ಯಾತ್ಮಕ ಅಂಶ. ಗಂಡು ಮಕ್ಕಳು ತೀರಿಸದ ಋಣವನ್ನು ಬೆಳ್ಳಿ ತೀರಿಸಿ ಬಂದಳೆಂಬ ಚೋಮನ ಸಂತೋಷ ಇನ್ನವಳು "ನನ್ನನ್ನು ಕಾಲಿನಿಂದ ತುಳಿದರೂ ಚಿಂತೆಯಿಲ್ಲ. ಒಮ್ಮೆ ನನ್ನ ಋಣವನ್ನು ತೀರಿಸಿದಳಲ್ಲ. ನನ್ನಿಂದೇನಾಯಿತು? ಅಯ್ಯೋ, ನನ್ನ ಬೆಳ್ಳಿಯು ಗಂಡಸಾಗಿ ಹುಟ್ಟಿದ್ದರೆ ನನ್ನ ಮೀಸೆ ಇನ್ನಷ್ಟು ಮೇಲಿತ್ತು!" ಎಂದು ಅವನು ಭಾವಿಸುವುದು ಅವಳ ಇತ್ಯಾತ್ಮಕ ಗುಣ ವಿಶೇಷಗಳಾಗಿ ಈ ತಿಳುವಳಿಕೆಯ ಹಿಂದಿನ ಸತ್ಯ ಬರೀ ಭ್ರಮೆ ಎಂಬ ಅರಿವು ಅವನಿಗಾದಾಗ ಅವಳು ದೋಷಿಯೋ, ನಿರ್ದೋಷಿಯೋ ಎಂಬ ವಿಚಾರ ಚರ್ಚೆಗೆ ಅವನ ಮನಸ್ಸು ಒಳಗಾಗುತ್ತದೆ. ಬೆಳ್ಳಿಯನ್ನು ಗಂಡಸಾಗಿ ಪರಿಭಾವಿಸುವ ಅವನ ಮನಸ್ಸು ಮನ್ವೇಲನೊಂದಿಗೆ ಅವಳ ಪ್ರಣಯದ ವಿವರ ತಿಳಿದು ಗುರುವಿನಂತೆ ಅವಳೂ...... ಯೋಚಿಸ್ತಲು ಸಾಧ್ಯವಾಗುವುದಿಲ್ಲ. ಬದಲಿಗೆ ' ನಾನೂ ಅವಳಂತೆ ಹೆಣ್ಣಾಗಿದ್ದರೆ...... ಎಂಬ ಹೆಂಗರುಳಿಗೆ ಮಿಡಿಯುತ್ತಾನೆ.

ಧೈರ್ಯ, ನಿಷ್ಠೆ, ಛಲ, ಸ್ವಾಭಿಮಾನವೆಂಬ ಇತ್ಯಾತ್ಮಕ ಗುಣವಿಶೇಷತೆಗಳಲ್ಲಿ ಹೆಣ್ಣು ಗಂಡಾಗಬಲ್ಲಳು; ಆದರೆ ಲೈಂಗಿಕತೆಯ ಪ್ರಶ್ನೆ ಬಂದಾಗ ಹೆಣ್ಣು ಹೆಣ್ಣಾಗಿಯೇ ಮಾನವೀಯ ಅನುಕಂಪಕ್ಕೆ ಒಳಗಾಗುತ್ತಾಳೆ. ಇದು ಸಹಜ ಕೂಡ. 'ಬೆಳ್ಳಿ ಗಂಡಸಾಗಿದ್ದರೆ ಮನೆಗೆ ಇನ್ನೊಬ್ಬ ಗುರು ಹೆಚ್ಚಾಗುತ್ತಿದ್ದ ಎಂಬ ಕಾರಂತರ ನಿಲುವಿನಲ್ಲಿ ಬೆಳ್ಳಿ ಹೆಣ್ಣಾಗಿಯೇ ಉಳಿದು ತಂದೆಯ ವಿಶ್ವಾಸ ಪ್ರೀತಿಯನ್ನು ಉಳಿಸುಕೊಳ್ಳುವಲ್ಲಿ ತನ್ನೊಳಗಿನ ತುಮುಲವನ್ನು ತಡೆಹಿಡಿದುಕೊಂಡಿರುವುದು ಕಾರಂತರಿಗೆ ವಿಶೇಷವಾಗಿ ತೋರುತ್ತದೆ. ಕಾರಂತರು ಬೆಳ್ಳಿಯನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದಿಲ್ಲ. ಚೋಮನ ಸಾವಿಗೆ ಅವಳು ಆಕಸ್ಮಿಕವಾಗಿಯೇ ಕಾರಣವಾದಳೇ ಹೊರತು ಪ್ರತ್ಯಕ್ಷ ಕಾರಣವೆಂದೂ ಎಲ್ಲಿಯೂ ಹೇಳುವುದಿಲ್ಲ. ಆದರೆ ಅವಳ ನೈತಿಕ ಭಷ್ಟತೆ ಚೋಮನನ್ನು ನಿಯಂತ್ರಿಸುವ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಬೆಳ್ಳಿಯ ಸಾಂತ್ವನ ರಹಿತ ಅನಾಥ ಸ್ಥಿತಿಯಲ್ಲಿ ಚೋಮ ತನ್ನ ಅಂತ್ಯವನ್ನು ಕಾಣಬೇಕಾಗುತ್ತದೆ.

ಜನಾಂಗ, ರಾಜಕಾರಣ ಮಾಡಿಸಿದ ಇನ್ನೊಂದು ಚಿತ್ರ ನೀಲನ ಸಾವು "ಇನ್ನು ಬೇಡ, ಈ ಊರಿನ ದೇವರ ತಂಟೆಯೇ ಬೇಡ! ತನಗಿನ್ನು ಕ್ರಿಸ್ತ ದೇವರು! ಮಗ ಗುರುವನನ್ನು ಬೇಸಾಯಗಾರನನ್ನಾಗಿ ಮಾಡಿದ ದೇವರು" ಎನ್ನುವ ನಿರ್ಣಯ ತೆಗೆದುಕೊಳ್ಳುವಲ್ಲಿ ಈ ವ್ಯವಸ್ಥೆ ಮಾಡಿಸಿದ ಕ್ರೂರ ಚಿತ್ರ ಕಾರಣ.

ಮೊದ ಮೊದಲು ಬೆಳ್ಳಿ ಚೋಮನ ಈ ನಿಲುವನ್ನು ತಿರಸ್ಕರಿಸಿದವಳಂತೆ ಕಂಡರೂ ಕೊನೆ ಕೊನೆಗೆ ತಾನೂ ಬದಲಾವಣೆಗೆ ಬಣ್ಣಿಸಿಕೊಳ್ಳುತ್ತಾಳೆ. ತಂದೆ ಬೇಸಾಯಗಾರನಾಗುವ ಕನಸು ಕಂಡರೆ ಬೆಳ್ಳಿ ಅಣ್ಣ ಗುರುವನನ್ನು ಸೇರುವ ಕನಸು

ಕಾಣುತ್ತಾಳೆ. ಅದಕ್ಕಿಂತಲೂ ಹೆಚ್ಚಾಗಿ "ಹಾಳು ಮನ್ವೇಲನ ಹಂಬಲವೂ ಬಂತು. ಅವಳ ವಿಲಾಸಿ ಜೀವನದ ಆಸೆಯು ತಿರುಗಿ ಮೊಳೆಯಿತು. ಒಮ್ಮೊಮ್ಮೆ ತನ್ನ ಕನಸಿನಲ್ಲಿ ತಾನು ಮನ್ವೇಲನ ಮಡದಿಯಾಗುವೆನೆಂದೂ ಚಿತ್ರಿಸಿಕೊಂಡಳು. "ತಾನು ಮನ್ವೇಲನ ಮಡದಿಯಾಗುವ ಕನಸಿಗೆ ಅವಳು ಹೂಡುವ ಕಾರಣ 'ಗುರುವ ಮೇರಿಯ ಪತಿಯಾಗಲಿಲ್ಲವೇ? ಎಂಬುವುದು ಗುರುವ ಜಾತಿಯ ಚೌಕಟ್ಟನ್ನು ಮೀರಿ ಹೋಗುವ ಸಾಹಸ ಮಾಡಿದಷ್ಟು ಸುಲಭವಾದ ಸಾಹಸ ಬೆಳ್ಳಿ ಮಾಡಲಾರಳು. ತಾನು ಮನ್ವೇಲನ ಮಡದಿಯಾಗಬೇಕು ಎನ್ನುವ ಉತ್ಕಟೇಚ್ಛೆಯನ್ನು ಬಾಯಿ ಬಿಟ್ಟು ಹೇಳಲಾರಳು. ಜಾತಿ ಅವಳನ್ನು ಅಡ್ಡಗಟ್ಟಿದೆ. ಪ್ರಾಯಶಃ ಈ ಜಾತಿಯ ನೆಲೆಯನ್ನು ಮೀರುವಲ್ಲಿ ಚೋಮನಿಗಿರುವ ಅನಿವಾರ್ಯತೆ ಬೇರೆ ಬೆಳ್ಳಿಗಿರುವ ಅನಿವಾರ್ಯತೆಯೇ ಬೇರೆ? ಚೋಮನಿಗೆ ಬೇಸಾಯಗಾರನಾಗುವ ಹಂಬಲ; ಬೆಳ್ಳಿಗೆ ಮನ್ವೇಲನೊಂದಿಗಿನ ವಿಲಾಸಿ ಬದುಕಿನ ಹಂಬಲ.

ತಂದೆ ಆಸೆ ಮತ್ತು ತನ್ನ ಆಸೆ ಎರಡೂ ಒಟ್ಟಿಗೆ ಕೈಗೂಡುವುದಾದರೆ "ನಾವಿನ್ನೂ ಪಾದ್ರಿ ಮತಕ್ಕೆ ಸೇರಿದರೇನಂತೆ"? ಎಂಬ ಅಭಿಪ್ರಾಯ ಅವಳದ್ದು. ಚೋಮನಿಗೆ ನೇಗಿಲಿನ ಯೋಗ, ಬೆಳ್ಳಿಗೆ ವಿವಾಹ ಯೋಗ, ಒಂದೇ ಕಲ್ಲಿಗೆ ಎರಡು ಹಣ್ಣು-ಬೆಳ್ಳಿಯ ಸೂಕ್ಷ್ಮ ಮನಸ್ಸಿನ ಲೆಕ್ಕಾಚಾರ. ಮೊದಮೊದಲು ಇಲ್ಲದ ಅನಿವಾರ್ಯತೆ ಮನ್ವೇಲನ ಕಾಫೀ ತೋಟಕ್ಕೆ ಹೋದ ಮೇಲೆ ಹುಟ್ಟಕೊಂಡ ವಯೋಸಹಜ ದೇಹ ಕಾಮನೆಯ ಅನಿವಾರ್ಯತೆ ಬೆಳ್ಳಿಗೆ ಬಲವಾಗಿರುವುದರಿಂದಲೇ ಚೋಮನ ಕನಸಿಗೆ ತನ್ನ ಕನಸಿನ ಕಸುವನ್ನು ಸೇರಿಸುತ್ತಾಳೆ. ತಂದೆಯ ಅಭಿಪ್ರಾಯವನ್ನು ಅನುಮೋದಿಸುತ್ತಾಳೆ. ತನ್ನ ವಯಸ್ಸಿನ ಆಸೆಗಳಿಗೆ ಪೂರ್ವ ಪೀಠಿಕೆ ಎಂಬಂತೆ ಗುರುವನನ್ನು ಪುನಃ ಕೂಡಿಕೊಳ್ಳುವುದಕ್ಕೆ ತಂದೆಯನ್ನು ಪುಸಲಾಯಿಸುತ್ತಾಳೆ. ಅಪ್ಪ ಹೋದವರು ಹೋದರು, ಇದ್ದವರ ಮೇಲೂ ನಾವು ಮುನಿದಿರಬೇಕೇ? ಗುರುವನನ್ನು ಕರೆದುಕೊಂಡು ಬರಬಾರದೇಕೆ? ಅವನು ಚೆನ್ನಾಗಿದ್ದರೆ, ಅವನ ಜೊತೆಯಲ್ಲಿಯೇ ನಾವು ಇದ್ದುಬಿಡುವ ನಿನ್ನ ಆಸೆಯೂ ಕೂಡಿಬಂದ ಹಾಗೆ ಆಗುತ್ತದೆ" ಎನ್ನುತ್ತಾಳೆ. ಜೊತೆಗೆ ಮನ್ವೇಲನೊಂದಿಗೆ "ಸೇರೆಗಾರರೇ, ನಾವಿನ್ನು ಪಾದ್ರಿ ಮತ ಸೇರುವುದೆಂದು ಮಾಡಿದ್ದೇವೆ" ಎನ್ನುವಲ್ಲಿಯೂ ಪ್ರಿಯಕರನನ್ನು ಸೇರುವುದಕ್ಕೆ ಬೆಳ್ಳಿ ತವಕಗೊಂಡಂತೆ ಕಾಣುತ್ತದೆ. ಇದೇ ಧೈರ್ಯ ಅವಳಿಗೆ ಇನ್ನೊಮ್ಮೆ ಪೂರ್ವದ ಪಾಪಮಯ ಗೆಳೆತನ ಬಯಸಿ ಬಂದ ಮನ್ವೇಲನೊಡನೆ ಪ್ರಣಯಾಭಿಲಾಷೆ ಮಾಡಿಸಿತು. ಮುಂದೆ ಅದೇ ದುರಂತಕ್ಕೂ ಕಾರಣವಾಯಿತು.

ಚೋಮನಿಗೆ 'ದುಡಿ'ಯಾದರೂ ಇದೇ ಆತನ ದುಃಖ ನೋವನ್ನು ಹೊರಹಾಕಲು ಸಾಧನ. ಆದರೆ ಬೆಳ್ಳಿಗೆ ಅದಾವುದೇ ಅವಕಾಶವಿಲ್ಲ. ಬೆಳ್ಳಿ ಎಂದರೆ ಮಗಳಲ್ಲ; ಹೆತ್ತ ತಾಯಿ. ಅವಳು ನೀಡುವ ಗಂಜಿಯೇ ಅವನಿಗೆ ಪರಮಾನ್ನ. ಮಗುವಿಗಿಂತಲೂ ಮಗು ಅವನು. ಅಸಹಾಯಕ ಬೇಸಾಯಗಾರನಾಗುವ ಅವನ ಆಸೆಯಲ್ಲಿ ಪರೋಕ್ಷವಾಗಿ ಬಲಿಯಾಗುವ ಚೆನಿಯ ಬಲಿಪಶುವಾಗುವ ಬೆಳ್ಳಿ ಇವರೆಲ್ಲರೂ ಒಂದೊಂದು ಅರ್ಥದಲ್ಲಿ ಅಸಹಾಯಕರೇ ಚೋಮನ ದುಡಿ ಅವನ ಮೌನಕ್ಕೆ ತೆರೆದ ನುಡಿ ಎಂಬ ಒಂದು ಅಭಿಪ್ರಾಯವನ್ನು ಹೊರತುಪಡಿಸಿದರೆ ಚೋಮನ ದುಡಿ ಎನ್ನುವುದಕ್ಕಿಂತ ಚೋಮನ ಕುಡಿ ಎಂದಿದ್ದರೂ ಅರ್ಥಪೂರ್ಣವೇ ಆಗುತ್ತಿತ್ತು. ಚೋಮನ ಅಸಹಾಯಕತೆಯ ಒಂದು ಭಾಗವೇ ಬೆಳ್ಳಿ. ಇವರಿಬ್ಬರೂ ದಲಿತ ಜಗತ್ತಿನ ವಿಶಿಷ್ಟ ಪ್ರತಿನಿಧಿಗಳು. ಬೆಳ್ಳಿಯನ್ನು ಹೊರತುಪಡಿಸಿ ಚೋಮನ ದುಡಿಯನ್ನು ನೋಡಲಾಗದು. ಹಾಗೆ ನೋಡಿದರೂ ಅದು ಅಪೂರ್ಣವೇ ಹೊರತು ಪರಿಪೂರ್ಣವಲ್ಲ. ಹಾಗಾಗಿ ಕಾರಂತರು ಬೆಳ್ಳಿಯ ಪಾತ್ರವನ್ನು ಸಹಜ ಜೀವಂತಿಕೆಯ ಕಲಾತ್ಮಕ ಪಾತ್ರವಾಗಿ ಸೃಷ್ಟಿಸಿದ್ದಾರೆ.

**ಆಕರ ಗ್ರಂಥಗಳು**


1. ಚೋಮನ ದುಡಿ ಕಾದಂಬರಿ : ಡಾ. ಶಿವರಾಮ ಕಾರಂತ
2. ಕಾದಂಬರಿ ಕಣ್ಣಲ್ಲಿ ಕಾರಂತರು : ಮಂಗಳ ಪ್ರಿಯದರ್ಶಿನಿ
3. ಶಿವರಾಮ ಕಾರಂತ ಎರಡು ಅಧ್ಯಯನ : ಅಶೋಕ ಬಿ.ಪಿ